ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	628
ಮಾನ್ಯ ಸದಸ್ಯರ ಹೆಸರು	:	ಶ್ರೀ ಹೆಚ್. ಎಂ. ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	04.03.2021
ಉತ್ತರಿಸುವವರು	:	ಮಾನ್ಯ ಮುಖ್ಯಮಂತ್ರಿಗಳು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಎನ್.ಪಿ.ಎಸ್ ನೌಕರರ ಹೊಸ ಪಿಂಚಣಿ ಯೋಜನೆಯ ಬದಲು ಹಳೆಯ ಯೋಜನೆಯನ್ನೇ ಮುಂದುವರೆಸಲು ಸರ್ಕಾರದ ಮುಂದಿರುವ ಸಮಸ್ಯೆಗಳೇನು; ಎನ್.ಪಿ.ಎಸ್ ನೌಕರರು ಮರಣ ಹೊಂದಿದರೆ ಅವರ ಕುಟುಂಬದವರಿಗೆ ಕೆಲಸ ನೀಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; (ಮಾಹಿತಿ ನೀಡುವುದು)	ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರೆಸಲು ಆರ್ಥಿಕ ಹೊರೆಯನ್ನು ನಿಭಾಯಿಸಲು ಸಾಕಷ್ಟು ನಿಧಿಯ ಆಧಾರ ಇಲ್ಲದಿರುವುದರಿಂದ ಹಾಗೂ ರಿಸರ್ವ್ ಬ್ಯಾಂಕ್‌ರವರು ರಚಿಸಿದ ಸಮಿತಿಯ ವರದಿಯ ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರ್ಕಾರವು ನೂತನ ಪಿಂಚಣಿ ಯೋಜನೆಯನ್ನು ದಿನಾಂಕ: 01.01.2004 ರಿಂದ ಜಾರಿಗೊಳಿಸಿರುತ್ತದೆ. ಅದರಂತೆಯೇ ಇತರೆ ರಾಜ್ಯಗಳು ಈ ಯೋಜನೆಯನ್ನು ಅಳವಡಿಸಿಕೊಂಡ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ಕೂಡ ಸರ್ಕಾರದ ಆದೇಶ ಸಂಖ್ಯೆ: ಆಇ (ಎಸ್.ಪಿ.ಎಲ್.) 04 ಪಿಇಟಿ 2005, ದಿನಾಂಕ: 31.03.2006ರನ್ವಯ ದಿನಾಂಕ: 01.04.2006ರಂದು ಮತ್ತು ತದನಂತರ ಸರ್ಕಾರಿ ಸೇವೆಗೆ ಸೇರುವ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿದೆ. ಎನ್.ಪಿ.ಎಸ್. ನೌಕರರು ಸರ್ಕಾರಿ ನೌಕರರಾಗಿರುವುದರಿಂದ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 ರನ್ವಯ ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ ಆತನ ಅವಲಂಬಿತರಲ್ಲಿ ಒಬ್ಬರಿಗೆ ಅರ್ಹತೆಯ ಆಧಾರದ ಮೇಲೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ.
ಆ)	ಎನ್.ಪಿ.ಎಸ್ ನೌಕರರ ವೇತನದಲ್ಲಿ ಶೇ 10ರಷ್ಟನ್ನು ಕಡಿತಗೊಳಿಸಲಾಗಿದ್ದು, ಇದನ್ನು ಯಾವ ಖಾತೆಗೆ ಜಮಾ ಮಾಡಲಾಗಿದೆ: (ವಿವರ ನೀಡುವುದು)	ಎನ್.ಪಿ.ಎಸ್ ನೌಕರರು ಸೇವೆಗೆ ಸೇರಿದ ನಂತರ ಕೆ.ಜಿ.ಐ.ಡಿ ಸಂಖ್ಯೆ ಪಡೆದು ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯಲ್ಲಿ ಸೇವಾ ಪುಸ್ತಕವನ್ನು ಸೃಜಿಸಿ, CSRF-1.2 (Common Subscriber Registration Form) Online ಮೂಲಕ ಸಲ್ಲಿಸಿ, Central Regulatory Authority ರವರಿಂದ 12ಅಂಕಿಗಳ ಪ್ರಾನ್ ಸಂಖ್ಯೆ ಪಡೆಯಲಾಗುತ್ತದೆ. ತದನಂತರ ಮಾನವ ಸಂಪನ್ಮೂಲ ನಿರ್ವಹಣೆ ವ್ಯವಸ್ಥೆಯಲ್ಲಿ ವೇತನ ಬಿಲ್ಲನ್ನು ಸಿದ್ದಪಡಿಸುವಾಗ ನೌಕರರ ಎನ್.ಪಿ.ಎಸ್. ವಂತಿಗೆ (ಮೂಲ ವೇತನ+ ತುಟ್ಟಿಭತ್ಯೆ) ಶೇ. 10ರಷ್ಟು ವೇತನದಿಂದ

<table>
<tr>
<td></td>
<td></td>
<td>ಕಟಾವಣೆಯಾಗುತ್ತದೆ. ಇದಕ್ಕೆ ಖಜಾನೆಯಿಂದ ಸರ್ಕಾರ ಶೇ.14ರಷ್ಟು ವಂತಿಗೆಯನ್ನು ಸೇರಿಸಿ, Central Regulatory Authority ರವರಲ್ಲಿ ತೆರೆದಿರುವ ಪ್ರಾನ್ ಖಾತೆಗೆ ಜಮಾ ಮಾಡಲಾಗುತ್ತಿದೆ.

ತದನಂತರ ಸದರಿ ಮೊತ್ತವನ್ನು ಎನ್.ಪಿ.ಎಸ್. ಟ್ರಸ್ಟ್ ನಿಂದ ನೇಮಿಸಿರುವ ಪಿಂಚಣಿ ನಿಧಿ ನಿರ್ವಾಹಕರಲ್ಲಿ (Pension Fund Manager) ಈ ಕೆಳಕಂಡಂತೆ ಹೂಡಿಕೆ ಮಾಡಲಾಗುತ್ತಿದೆ.

<table>
<tr><td>1</td><td>ಎಸ್.ಬಿ.ಐ</td><td>38.50%</td></tr>
<tr><td>2</td><td>ಎಲ್. ಐ.ಸಿ</td><td>29.50%</td></tr>
<tr><td>3</td><td>ಯು. ಟಿ. ಐ</td><td>32.00%</td></tr>
</table>
</td>
</tr>
<tr>
<td>ಇ)</td>
<td>ಎನ್.ಪಿ.ಎಸ್ ನೌಕರರಿಗೆ ಜಿ.ಪಿ.ಎಫ್ ಖಾತೆ ತೆರೆಯುವ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)</td>
<td>ಕರ್ನಾಟಕ ಸರ್ಕಾರಿ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು, 2016ರ ನಿಯಮಗಳು ಎನ್.ಪಿ.ಎಸ್. ನೌಕರರಿಗೆ ಅನ್ವಯಿಸುವುದಿಲ್ಲ.</td>
</tr>
<tr>
<td>ಈ)</td>
<td>ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸರ್ಕಾರಿ ಕಛೇರಿಯಲ್ಲಿ ಕೊರತೆಯಿರುವ ಸಿಬ್ಬಂದಿಗಳ ಭರ್ತಿ ಪ್ರಕ್ರಿಯೆ ಪೂರ್ಣವಾಗಿದೆಯೇ? ವಿವರಗಳೊಂದಿಗೆ ಮಾಹಿತಿ ನೀಡುವುದು)</td>
<td>ಆರ್ಥಿಕ ಮಿತವ್ಯಯ ಆದೇಶವನ್ನು ಗಮನದಲ್ಲಿರಿಸಿ ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

ಪ್ರಸ್ತುತ 7,72,435 ಮಂಜೂರಾದ ಹುದ್ದೆಗಳ ಪೈಕಿ 5,18,632 ಹುದ್ದೆಗಳು ಭರ್ತಿಯಾಗಿವೆ.</td>
</tr>
</table>

ಆಇ 44 ಪಿಇಎನ್ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

***